ಕೆ.ಇ.ಬಿ.ಯಲ್ಲಿ ಉಗ್ರಾಣದ ಸೌಲಭ್ಯ.

(635) ಶ್ರೀ ಕೆ.ಹೆಚ್. ಕುರುಡಗಿ (ಮುಂಡರಗಿ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಮುಂಡರಗಿಯ ವಿದ್ಯುತ್ತಿನ ಉಪವಿಭಾಗದಲ್ಲಿ ಉಗ್ರಾಣದ ವ್ಯವಸ್ಥೆಗಾಗಿ ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

ಶ್ರೀ.ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು)

ಮಂಡಳಿಯು ಮುಂಡರಗಿ ಉಪವಿಭಾಗವನ್ನು ಮಂಜೂರು ಮಾಡುವಾಗ, ಉಪವಿಭಾಗದ ಉಗ್ರಾಣವನ್ನು ಸಹ ಮಂಜೂರು ಮಾಡಿದೆ. ಆದರೆ, ಮಂಡಳಿಯು ಆರ್ಥಿಕ ವ್ಯವಸ್ಥೆಯ ಸುಧಾರಣೆಗೆ ತೆಗೆದುಕೊಂಡಿರುವ ಕ್ರಮಗಳಿಗನುಸಾರವಾಗಿ ಸದರಿ ಉಪವಿಭಾಗದ ಉಗ್ರಾಣ ಕಾರ್ಯಾಚರಣೆಯನ್ನು ಪ್ರಾರಂಭ ಮಾಡಿರುವುದಿಲ್ಲ. ಹಾಲಿ ಉಪವಿಭಾಗದ ಕೆಲಸಕ್ಕೆ ಬೇಕಾದ ಸಾಮಗ್ರಿಗಳನ್ನು ಹತ್ತಿರದ ಮಂಡಳಿಯ ಉಗ್ರಾಣದಿಂದ ಸರಬರಾಜು ಮಾಡಲಾಗುತ್ತಿದ್ದು ಈ ಉಪ ವಿಭಾಗದ ಕೆಲಸಗಳು ಸರಾಗವಾಗಿ ನಡೆಯುತ್ತಿರುತ್ತವೆ. ಇದರಿಂದ ಯಾವ ಅಡಚಣೆಯೂ ಕಂಡು ಬಂದಿರುವುದಿಲ್ಲ.

ಶ್ರೀ ಕೆ.ಎಚ್. ಕುರುಡಗಿ:– ಮಾನ್ಯ ಉಪಾಧ್ಯಕ್ಷರೇ, ಇದಕ್ಕಿಂತ ಮೊದಲು ನೂತನವಾಗಿ ಮಂತ್ರಿಮಂಡಲ ರಚನೆ ಆಗಿದೆ. ಈ ಸಭೆಗೆ ಮಂತ್ರಿಮಂಡಲದ ಪರಿಚಯ ಕೂಡ ಆಗಿಲ್ಲ. ಅದು ಏನೇ ಇರಲಿ ಮಾನ್ಯ ಮುಖ್ಯಮಂತ್ರಿಗಳು ನನ್ನ ಪ್ರಶ್ನೆಗೆ ಮುಂಡರಗಿಯ ವಿದ್ಯುತ್ತಿನ ಉಪವಿಭಾಗದಲ್ಲಿ ಉಗ್ರಾಣದ ವ್ಯವಸ್ಥೆಯನ್ನು ಸಧ್ಯಕ್ಕೆ ಮಾಡುವುದಕ್ಕೆ ಆಗುವುದಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಆಲ್ಲಿ ಬಹಳ ತೊಂದರೆಯಾಗಿರುವುದರಿಂದ ಎಷ್ಟು ಬೇಗ ಸಾಧ್ಯವಾಗುತ್ತದೋ ಅಷ್ಟು ಬೇಗ ಉಗ್ರಾಣ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ಮಾನ್ಯ ಉಪಾಧ್ಯಕ್ಷರೇ, ಆಲ್ಲಿ ಉಗ್ರಾಣ ಮಾಡಬೇಕೆಂದು ಮಂಜೂರು ಆಗಿದೆ. ಅದರ ಬಗ್ಗೆ ಬರುವ ಆರ್ಥಿಕ ವರ್ಷದಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ.

ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಪ್ರಾಥಮಿಕ ಆರೋಗ್ಯ ಘಟಕಗಳ ಮಂಜೂರಾತಿ.

(408) ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಾಸನ ಜಿಲ್ಲೆಯ ಯಾವ ಯಾವ ವಿಧಾನ ಸಭೆಯ ಕ್ಷೇತ್ರಗಳಿಗೆ ಸರ್ಕಾರವು ಕಳೆದ ಮೂರು ವರ್ಷಗಳಿಂದ ಪಿ.ಹೆಚ್.ಸಿ., ಪಿ.ಹೆಚ್.ಯು.ಗಳನ್ನು ಮಂಜೂರು ಮಾಡಿದೆ ? (ವರ್ಷವಾರು ವಿವರ ನೀಡುವುದು)

ಆ) ಹಾಸನ ಜಿಲ್ಲೆಯ ಯಾವ ಯಾವ ವಿಧಾನಸಭಾ ಕ್ಷೇತ್ರಗಳಲ್ಲಿ ಪಿ.ಹೆಚ್.ಸಿ. ಮತ್ತು ಪಿ.ಹೆಚ್.ಯು ಮಂಜೂರು ಮಾಡುವಂತೆ ಸರ್ಕಾರಕ್ಕೆ ವಿನಂತಿಗಳು ಬಂದಿದ್ದವು ? (ವಿವರ ನೀಡುವುದು).

ಇ) ಪಿ.ಹೆಚ್.ಸಿ., ಪಿ.ಹೆಚ್.ಯುಗಳನ್ನು ಸರ್ಕಾರ ಮಂಜೂರು ಮಾಡುವಾಗ ಯಾವ ವಿಚಾರಗಳನ್ನು ಗಣನೆಗೆ ತೆಗೆದುಕೊಳ್ಳುತ್ತದೆ ?

ಈ) ಹಾಸನ ಜಿಲ್ಲೆಯ ಯಾವ ಯಾವ ವಿಧಾನಸಭೆಯ ಕ್ಷೇತ್ರಗಳಿಗೆ ಕಳೆದ ಮೂರು ವರ್ಷದಿಂದ ಪಿ.ಹೆಚ್.ಸಿ. ಅಥವಾ ಪಿ.ಹೆಚ್.ಯುಗಳನ್ನು ಮಂಜೂರು ಮಾಡಿರುವುದಿಲ್ಲ. (ವಿವರ ನೀಡುವುದು)

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು)

ಅ) ದಿನಾಂಕ 1–4–87ರಿಂದ ರಾಜ್ಯದಲ್ಲಿ ಪ್ರಾ. ಆ. ಘಟಕಗಳನ್ನು ಮಂಜೂರು ಮಾಡುವುದನ್ನು ನಿಲ್ಲಿಸಲಾಗಿದೆ. 1990–91ನೇ ಸಾಲಿನಿಂದ 1992–93ನೇ ಸಾಲಿನವರೆಗೆ ಹಾಸನ ಜಿಲ್ಲೆಯ ವಿಧಾನಸಭಾ ಕ್ಷೇತ್ರಗಳಿಗೆ ಮಂಜೂರಾದ ಪ್ರಾ. ಆ. ಕೇಂದ್ರಗಳ ವಿವರ ಕೆಳಗಿನಂತಿದೆ:–

ವಿಧಾನಸಭಾ ಕ್ಷೇತ್ರ	90–91		91–92		92–93	
	ಒಟ್ಟು ಸಂಖ್ಯೆ	ಸ್ಥಳ	ಒಟ್ಟು ಸಂಖ್ಯೆ	ಸ್ಥಳ	ಒಟ್ಟು ಸಂಖ್ಯೆ	ಸ್ಥಳ
ಹಾಸನ	–	–	1	ಕಾರ್ಲೆ	–	–
ಅರಸೀಕೆರೆ	1	ಶಶಿವಾಳ	–	–	–	–
ಶ್ರವಣ ಬೆಳಗೊಳ	–	–	–	–	–	–
ಹೊಳೆನರಸೀಪುರ	1	ಕೆರೆಗೋಡು	1	ಚಾಕನಹಳ್ಳಿ	1	ತಾತನಹಳ್ಳಿ
ಗಂಡಸಿ ಕ್ಷೇತ್ರ	1	ಕೊಂಡೆನಾಳು	1	ಬಾಗೇವಾಳು	1	ಚಿಕ್ಕಕಡಲೂರು
ಬೇಲೂರು	1	ಅಡಗೂರು	–	–	–	–
ಸಕಲೇಶಪುರ	1	ಕುಂದೂರು ಚನ್ನಾಪುರ	–	–	1	ಕಲಗಳಲೆ
ಅರಕಲಗೂಡು	–	–	–	–	1	ಗಂಗೂರು
ಒಟ್ಟು	5		3		4	

ಆ) ಪ್ರಾ. ಆ. ಘಟಕಕ್ಕೆ ಮನವಿ ಬಂದಿರುವುದಿಲ್ಲ. ಪ್ರಾ.ಆ. ಕೇಂದ್ರವನ್ನು ಮಂಜೂರು ಮಾಡಲು ಬಂದ ವಿನಂತಿಗಳ ವಿವರವನ್ನು ಅನುಬಂಧದಲ್ಲಿ ಕೊಡಲಾಗಿದೆ.

ಇ) 1–4–87ರಿಂದ ಪ್ರಾ. ಆ. ಘಟಕಗಳನ್ನು ಮಂಜೂರು ಮಾಡುವುದನ್ನು ನಿಲ್ಲಿಸಲಾಗಿದೆ. ಸಾಮಾನ್ಯವಾಗಿ ಒಂದು ಪ್ರಾ.ಆ. ಕೇಂದ್ರವನ್ನು ಮಂಜೂರು ಮಾಡಲು ಬಯಲು ಸೀಮೆಯಲ್ಲಿ 30,000 ಜನಸಂಖ್ಯೆ ಹಾಗೂ ಗುಡ್ಡಗಾಡು ಹಾಗೂ ಆದಿವಾಸಿ ಪ್ರದೇಶಗಳಿಗೆ 20,000 ಜನಸಂಖ್ಯೆಗಳು ಇರಬೇಕು.

ಜಿಲ್ಲಾ ಪರಿಷತ್ತಿನ ಅನುಮೋದನೆಯೊಂದಿಗೆ ಸ್ವೀಕರಿಸಿದ ಪ್ರಸ್ತಾವನೆಗಳು ಶಾಸಕರು ಮತ್ತು ಸ್ಥಳೀಯ ಜನರ ಬೇಡಿಕೆಗಳನ್ನು ಆಧರಿಸಿ ಸರ್ಕಾರವು ಅಂತಿಮ ತೀರ್ಮಾನ ತೆಗೆದುಕೊಳ್ಳುವುದು.

ಈ) 1) ಪಿ.ಹೆಚ್. ಯುಗಳನ್ನು ಮಂಜೂರು ಮಾಡಿರುವುದಿಲ್ಲ.
2) 90-91ನೇ ಸಾಲಿನಿಂದ 92–93ನೇ ಸಾಲಿನವರೆಗೆ ಶ್ರವಣ ಬೆಳಗೊಳ ವಿಧಾನಸಭಾ ಕ್ಷೇತ್ರವನ್ನು ಬಿಟ್ಟು ಉಳಿದ ಎಲ್ಲಾ ವಿಧಾನ ಸಭಾ ಕ್ಷೇತ್ರಗಳಿಗೆ ಪ್ರಾ.ಆ. ಕೇಂದ್ರ ಮಂಜೂರು ಮಾಡಲಾಗಿದೆ.

ವಿವರ:

ಹಾಸನ ವಿಧಾನ ಸಭಾ ಕ್ಷೇತ್ರ - 1
ಅರಕಲಗೂಡು - 1
ಅರಸೀಕೆರೆ - 1
ಹೊಳೆನರಸೀಪುರ - 3
ಗಂಡಸಿ ಕ್ಷೇತ್ರ - 3
ಬೇಲೂರು - 1
ಸಕಲೇಶಪುರ - 2

ಅನುಬಂಧ–1

ಹಾಸನಜಿಲ್ಲೆಗೆ ಹೊಸದಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು 1991–92ನೇ ಸಾಲಿಗೆ ಮಂಜೂರು ಮಾಡಲು ಬಂದ ಮನವಿಗಳ ಪಟ್ಟಿ.

ಸಂಖ್ಯೆ	ತಾಲ್ಲೂಕು	ಸ್ಥಳಗಳ ಹೆಸರು	ಮಂತ್ರಿಗಳು: ಲೋಕಸಭಾ ಸದಸ್ಯರು: ಶಾಸಕರು ಇತರೆ
1.	ಹಾಸನ	ಪಡವಳಲು	ರೈತ ಸಂಘದವರಿಂದ
2.	ಬೇಲೂರು	ಅಡಗೂರು	ಗ್ರಾಮಸ್ಥರು
3.	ಬೇಲೂರು	ಗಂಗೂರು	ಗ್ರಾಮಸ್ಥರು
4.	ಹಾಸನ	ಹೂವಿನಳ್ಳಿ ಕಾವಲು	ಶ್ರೀ ಕೆ.ಹೆಚ್.ಹನುಮೇಗೌಡ
5.	ಚನ್ನರಾಯಪಟ್ಟಣ	ಕಬ್ಬಳ್ಳಿ ಗ್ರಾಮ	ತೆಂಗು ಅಭಿವೃದ್ಧಿ ಮಂಡಳಿ ಅಧ್ಯಕ್ಷರು
6.	ಹೊಳೆನರಸೀಪುರ	ಕಾಕೇನಹಳ್ಳಿ	ಗ್ರಾಮಸ್ಥರು
7.	ಬೇಲೂರು	ಚಿಕ್ಕೋಡಿ	ಪ್ರಧಾನರು, ಚಿಕ್ಕೋಡಿ ಮಂಡಲಪಂಚಾಯತ್
8.	ಅರಸೀಕೆರೆ	ಕೆಂಕೆರೆ	ಮುಖ್ಯಮಂತ್ರಿಯವರ ಕಛೇರಿಯಿಂದ
9.	ಹಾಸನ	ಕುದುರುಗುಂಡಿ	ಮುಖ್ಯಮಂತ್ರಿಯವರ ಕಛೇರಿಯಿಂದ
10	ಹಾಸನ	ಉಗಾನೆ	ಮುಖ್ಯಮಂತ್ರಿಯವರ ಕಛೇರಿಯಿಂದ
11.	ಅರಸೀಕೆರೆ	ಚೇರುವರು	ಮುಖ್ಯಮಂತ್ರಿಯವರ ಕಛೇರಿಯಿಂದ
12.	ಹಾಸನ	ಕಾರ್ಲೆ	ಗ್ರಾಮಸ್ಥರು
13.	ಅರಕಲಗೂಡು	ಬೆಳವಾಡಿ	ಎ.ಟಿ. ರಾಮಸ್ವಾಮಿ, ಶಾಸಕರು
14.	ಅರಕಲಗೂಡು	ರುದ್ರಾಪಟ್ಟಣ	ಎ.ಟಿ. ರಾಮಸ್ವಾಮಿ, ಶಾಸಕರು
15.	ಹಾಸನ	ಅಣತಿ	ಗ್ರಾಮಸ್ಥರು
16.	ಅರಕಲಗೂಡು	ಬೆಳವಾಡಿ	ಪ್ರಧಾನರು
17.	ಅರಕಲಗೂಡು	ಉಳಿಕಲ್	ಗ್ರಾಮಸ್ಥರು
18.	ಅರಸೀಕೆರೆ	ಬಾಗೇವಾಡಿ	ಗ್ರಾಮಸ್ಥರು
19.	ಅರಸೀಕೆರೆ	ಶಶಿವಾಳ	ಶ್ರೀ ಗಂಗಾಧರ ರಾಜಯೋಗೇಂದ್ರ ಮಹಾಸ್ವಾಮಿ, ಮೂರು ಸಾವಿರ ಮಠ, ಹುಬ್ಬಳ್ಳಿ.
20.	ಹೊಳೆನರಸಿಪುರ	ವಳಂಚಿಗೆಮೂಳೆ	ಗ್ರಾಮಸ್ಥರು
		ಕಾಳೇನಹಳ್ಳಿ	ಗ್ರಾಮಸ್ಥರು
21.	ಚನ್ನರಾಯಪಟ್ಟಣ	ಗಿರಿಕ್ಷೇತ್ರ	ಗ್ರಾಮಸ್ಥರು
22.	ಹೊಳೆನರಸಿಪುರ	ದೊಡ್ಡ ಬ್ಯಾಗತಹಳ್ಳಿ	ನಂಜೇಗೌಡ, ಲೋಕಸಭಾ ಸದಸ್ಯರು
23.	ಹಾಸನ	ಚಿಕ್ಕಡಲೂರು	ಆರೋಗ್ಯ ಮಂತ್ರಿಗಳು
24.	ಹೊಳೆನರಸಿಪುರ	ನಗರನಹಳ್ಳಿ	ನಿರ್ದೇಶಕರು
25.	ಅರಸೀಕೆರೆ	ಬಾಗೇಶಪುರ	ನಿರ್ದೇಶಕರು
26.	ಹಾಸನ	ಚಿಕ್ಕಡಲೂರು	

27.	ಅರಸೀಕೆರೆ	ಹರಳಕಟ್ಟೆ	ಎಸ್. ಮಲ್ಲಿಕಾರ್ಜುನಯ್ಯ, ಲೋಕಸಭಾ ಉಪಾಧ್ಯಕ್ಷರು
28.	ಅರಕಲಗೂಡು	ಗಂಗೂರು	ಆರೋಗ್ಯ ಮಂತ್ರಿಗಳು
29.	ಬೇಲೂರು	ಚಿಕ್ಕೋಡಿ	ಪ್ರಧಾನರು, ಮಂಡಲ ಪಂಚಾಯತ್
30.	ಅರಸೀಕೆರೆ	ಎರಡವನಹಳ್ಳಿ	ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು
31.	ಹಾಸನ	ಶಂಕರನಹಳ್ಳಿ	ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು
32.	ಹೊಳೆನರಸಿಪುರ	ಹಿರೇಹಳ್ಳಿಕೊಪ್ಪಲು ಕಾಕನಹಳ್ಳಿ	ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು
33.	ಹೊಳೆನರಸಿಪುರ	ಹಿರೇಹಳ್ಳಿ ಕೊಪ್ಪಲು	ಹೆಚ್. ಎನ್. ಮಾಳೇಗೌಡ, ಜಿಲ್ಲಾ ಪರಿಷತ್ ಸದಸ್ಯ
34.	ಹಾಸನ	ಹೂವಿನಹಳ್ಳಿ ಕಾವಲು	ಕೆ.ಹೆಚ್. ಹನುಮೇಗೌಡ, ಶಾಸಕರು, (ಮುಖ್ಯಮಂತ್ರಿಗಳ ಕಛೇರಿಯಿಂದ)
35.	ಅರಸೀಕೆರೆ	ಶಂಕರನ ಹಳ್ಳಿ	ಗ್ರಾಮಸ್ಥರು
36.	ಬೇಲೂರು	ನಾರ್ವೆ	ಆರೋಗ್ಯ ಮಂತ್ರಿಗಳಿಂದ
37.	ಅರಸೀಕೆರೆ	ಲಹತೆರೆ	ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಂದ
38.	ಅರಸೀಕೆರೆ	ಕಲ್ಲು ಸಾಗರಹಳ್ಳಿ	ಪ್ರಭುಕುಮಾರ್, ಶಾಸಕರು
39.	ಚನ್ನರಾಯಪಟ್ಟಣ	ಚನ್ನೇನ ಹಳ್ಳಿ	ಗ್ರಾಮಸ್ಥರು
40.	ಹಾಸನ	ರುದ್ರಾಪಟ್ಟಣ	ಗ್ರಾಮಸ್ಥರು
41.	ಹಾಸನ	ಹೂವಿನಹಳ್ಳಿ ಕಾವಲು	ಮುಖ್ಯಮಂತ್ರಿಗಳು
42.	ಬೇಲೂರು	ಚಿಕ್ಕೋಡಿ	ಜಿಲ್ಲಾ ಪರಿಷತ್ ಸದಸ್ಯರು
43.	ಸಕಲೇಶಪುರ	ಎಲಗಳಲೆ	ಆರೋಗ್ಯ ಮಂತ್ರಿಗಳು
44.	ಚನ್ನರಾಯಪಟ್ಟಣ	ಕೆಂಬಾವಿ	ಆರೋಗ್ಯ ಮಂತ್ರಿಗಳು
45.	ಅರಕಲಗೂಡು	ದನಗೂರು	ಹೆಚ್.ಎನ್. ನಂಜೇಗೌಡ, ಮಾಜಿ ಲೋಕಸಭಾ ಸದಸ್ಯರು.

ಶ್ರೀ ಕೆ.ಎಚ್. ಹನುಮೇಗೌಡ:– ಮಾನ್ಯ ಅಧ್ಯಕ್ಷರೇ, ಹಾಸನ ಕ್ಷೇತ್ರದ ಹೂವಿನಹಳ್ಳಿ ಕಾವಲು ಮತ್ತು ಕಂದಲಿ ಗ್ರಾಮಸ್ಥರು ಆರೋಗ್ಯ ಘಟಕಗಳನ್ನು ಮಂಜೂರು ಮಾಡಬೇಕೆಂದು ಜಿಲ್ಲಾ ಪರಿಷತ್ತಿಗೆ ಮನವಿ ಸಲ್ಲಿಸಿ, ಜಿಲ್ಲಾ ಪರಿಷತ್ತಿನವರು ಜಿಲ್ಲಾ ಪರಿಷತ್ತಿನ ಆರೋಗ್ಯ ವಿಭಾಗದವರು ಹೋಗಿ ಅದನ್ನು ಪರಿಶೀಲನೆ ಮಾಡಿ ಅಲ್ಲಿ ಅವಶ್ಯಕತೆ ಇದೆ ಎಂದು ಸರ್ಕಾರಕ್ಕೆ ವರದಿ ಸಲ್ಲಿಸಿರುವುದು ನಿಜ ಅಲ್ಲವೇ ? ಜಿಲ್ಲಾ ಪರಿಷತ್ತಿನವರು ಮಂಜೂರು ಮಾಡಿ ಈ ಗ್ರಾಮದವರು ಕೊಡಬೇಕಾಗಿರುವ 6ಎಕರೆ ಜಮೀನು ಮತ್ತು 50ಸಾವಿರ ರೂಪಾಯಿ ದುಡ್ಡು ಹಂಚಿಕೊಂಡು ಡಿಪಾಸಿಟ್ ಮಾಡುವುದಕ್ಕೆ ತಯಾರಾಗಿದ್ದರೂ ಕೂಡ ಈ ಎರಡು ಗ್ರಾಮಗಳಿಗೆ ಆರೋಗ್ಯಘಟಕಗಳನ್ನು ಮಂಜೂರು ಮಾಡದಿರಲು ಕಾರಣವೇನು ?

ಶ್ರೀ ಎಂ. ವೀರಪ್ಪ ಮೊಯಿಲಿ:– ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಕಾರಣ ಸ್ವಲ್ಪ ಹುಡುಕಬೇಕಾಗುತ್ತದೆ. ಆದರೆ, ಉಳಿದ ಸ್ಥಳಗಳಲ್ಲಿ ಜಿಲ್ಲಾಪರಿಷತ್ತಿನವರು ಶಿಫಾರಸ್ಸು ಮಾಡಿದಂಥ ಕೇಂದ್ರಗಳಲ್ಲಿ ಮಾಡಬೇಕೆಂದು ಹೇಳಿದೆ, ಅದರ ಬಗ್ಗೆ ನಾವು ಆದಷ್ಟು ಜಾಗ್ರತೆ ನಿರ್ಣಯ

ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಹೆಚ್. ಹನುಮೇಗೌಡ:– ಮಾನ್ಯ ಉಪಾಧ್ಯಕ್ಷಿಣಿಯವರೆ, ಏತಕ್ಕೆ ಆಗಲಿಲ್ಲ ಎನ್ನುವ ಕಾರಣ ಮಾನ್ಯ ಮುಖ್ಯಮಂತ್ರಿಗಳಿಗೆ ಚೆನ್ನಾಗಿ ಗೊತ್ತು; ನಾನು ಅವರನ್ನು ಕೇಳಿಕೊಳ್ಳುತ್ತೇನೆ. ಏನು ಅನ್ಯಾಯವಾಗಿದೆಯೋ ಆ ಕಾರ್ಯವನ್ನು ಅವರ ಕಾಲದಲ್ಲೆ ಸರಿಪಡಿಸಿಕೊಡಬೇಕೆಂದು ಕೇಳುತ್ತೇನೆ. ಹಾಗೆಯೇ, ಹಿಂದೆ ಆರೋಗ್ಯ ಸಚಿವರಾಗಿದ್ದ ಶ್ರೀಮತಿ ನಾಗರತ್ನಮ್ಮನವರು ಹೂವಿನಹಳ್ಳಿಕಾವಲಿಗೆ ಆಸ್ಪತ್ರೆಯನ್ನು ಮಂಜೂರು ಮಾಡಿದ್ದರು. ನಾನು ಹೋಗಿ ಅವರನ್ನು ಕೇಳಿದ್ದೆ. ಅವರು ಮಾಡಿದ್ದೇನೆಂದು ಕೂಡ ಹೇಳಿದ್ದರು. ಆಮೇಲೆ ಅದು ಬದಲಾವಣೆ ಆಯಿತು; ಏಕೆ ? ನಾನು ಕೇಳುತ್ತಿರುವುದು ಮಂಜೂರು ಆದದ್ದು ವಜಾ ಆಯಿತು. ಏಕೆ ? ಹಾಸನ ಕ್ಷೇತ್ರದ ಜನ ಮಾಡಿದ ಪಾಪ ಏನು ? ಹಾಸನ ಜಿಲ್ಲೆಯಲ್ಲಿ ಉಳಿದ ಕ್ಷೇತ್ರದ ಜನ ಮಾಡಿದ ಪುಣ್ಯ ಏನು ? ಸರ್ಕಾರದ ವತಿಯಿಂದ ಏನು ಅವಶ್ಯಕತೆ ಇದೆಯೋ, ಯಾರಿಗೆ ಏನು ಆಗಬೇಕೋ ಅದನ್ನು ತಿಳಿದುಕೊಂಡು ನಿರ್ದಾಕ್ಷಿಣ್ಯವಾಗಿ ಕೆಲಸ ಮಾಡತಕ್ಕಂಥ ಮಂತ್ರಿಗಳಿದ್ದರೆ, ಸರ್ಕಾರ ಇದ್ದರೆ ಜನಗಳಿಗೆ ಕ್ಷೇಮವಾಗುತ್ತದೆ, ನೆಮ್ಮದಿಯಾಗುತ್ತದೆ. ಹೇಳುವವರಿಲ್ಲ, ಕೇಳುವವರಿಲ್ಲ ಎಂದು ಮನಸ್ಸಿಗೆ ಬಂದ ಹಾಗೆ ವ್ಯವಹಾರ ಮಾಡುವುದಾದರೆ ಸರ್ಕಾರ ಆಗುತ್ತದೆಯೇ ? ನಿಯಮ ಆಗುತ್ತದೆಯೇ ? ಜನಗಳಿಗೆ ಏನು ಆಶೋತ್ತರಗಳನ್ನು ಕೊಡುತ್ತಾ ಬಂದಿದ್ದೇವೆಯೋ ಅವನ್ನು ನೆರವೇರಿಸಿದ ಹಾಗೆ ಆಗುತ್ತದೆಯೇ ?

ಉಪಾಧ್ಯಕ್ಷಿಣಿಯವರು:– ಉತ್ತರ ಹೇಳುತ್ತಾರೆ ತಡೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ:– ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಹಾಸನ ಜಿಲ್ಲೆಯವರೆಲ್ಲಾ ಪುಣ್ಯ ಮಾಡಿದವರೆ. ಏಕೆಂದರೆ, ಒಳ್ಳೆಯ ದೇವಸ್ಥಾನ, ಶಿಲ್ಪ ಕಲೆ, ಮತ್ತು ಒಳ್ಳೆಯ ಸಂಸ್ಕೃತಿಯುಳ್ಳಂಥ ಒಂದು ಜಿಲ್ಲೆ. ಹಾಸನ ತಾಲ್ಲೂಕು ಕೂಡ ಹಾಸನ ಜಿಲ್ಲೆಯಲ್ಲಿ ಇರುವುದರಿಂದ ಅದೂ ಕೂಡ ಪುಣ್ಯ ಸ್ಥಳವೇ. ಆದರೆ ಆ ಹಾಸನ ತಾಲ್ಲೂಕಿನ ಹೂವಿನಹಳ್ಳಿಕಾವಲಿಗೆ ಆಸ್ಪತ್ರೆ ಮಂಜೂರಾಗಿತ್ತು ಎಂದು ಹಿಂದಿನ ಆರೋಗ್ಯ ಸಚಿವೆಯವರಾದ ಶ್ರೀಮತಿ ನಾಗರತ್ನಮ್ಮನವರು ಹೇಳಿದ್ದರೆ ಅದನ್ನು ನಾವು ತರಿಸಿ ಅದನ್ನು ಮಂಜೂರು ಮಾಡುತ್ತೇವೆ. ಯಾವ ರೀತಿಯ ತಾರತಮ್ಯ ತೊಂದರೆ ಆಗದ ಹಾಗೆ ನಾವು ಎಲ್ಲಾ ಪರಿಶೀಲನೆ ಮಾಡಿ ಹಾಸನ ತಾಲ್ಲೂಕಿಗೆ ಏನು ನಿಮ್ಮ ಪಾಲಿನ ಆರೋಗ್ಯ ಕೇಂದ್ರಗಳು ಸಿಗಬೇಕೋ ಅದನ್ನು ಮಾಡಿಸತಕ್ಕಂಥ ಜವಾಬ್ದಾರಿ ಸರ್ಕಾರದ್ದು.

ಉಪಾಧ್ಯಕ್ಷಿಣಿಯವರು:– ಮಾಡಿ ಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಕೆ.ಹೆಚ್ ಹನುಮೇಗೌಡ:– ಮೊದಲು ನನ್ನ ಕ್ವೆಶ್ಚನ್ ಕೇಳಿ. ಕ್ವೆಶ್ಚನ್ ಕೊಟ್ಟಿರುವವನು ನಾನು. ಮೊದಲು ನನ್ನ ಕ್ವೆಶ್ಚನ್ ಆಗಲಿ. ನನಗೆ 3 ಪ್ರಶ್ನೆಗಳನ್ನು ಕೇಳುವುದಕ್ಕೆ ಅಧಿಕಾರ ಇದೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ:– ಒಂದೇ ಒಂದು ಸಪ್ಲಿಮೆಂಟರಿ ಕೇಳುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಬಯಸುತ್ತೇನೆ. ಹಾಸನ ಜಿಲ್ಲಾ ಆಸ್ಪತ್ರೆ ಹಾಸನ ಕ್ಷೇತ್ರಕ್ಕೆ ಸೇರಿದ್ದು. 24 ಕೋಟಿ ರೂಪಾಯಿಗಳ ಆಸ್ಪತ್ರೆ ಮಂಜೂರಾಗಿದೆಯೆಂದು ಹೇಳುವುದು ನಿಜವೆ ? ಕಡ್ಡಾಯ ಕೇಂದ್ರಕ್ಕೆ ಆಯುರ್ವೇದ ಆಸ್ಪತ್ರೆಯನ್ನು ಅಪ್‌ಗ್ರೇಡ್ ಮಾಡಿರತಕ್ಕಂಥದ್ದು ನಿಜವೆ ? ಹಾಸನ ಟೌನ್‌ಗೆ ಸಂಬಂಧಪಟ್ಟಂತೆ 50 ಹಾಸಿಗೆಗಳುಳ್ಳ ಆಯುರ್ವೇದ ಕಾಲೇಜು ಮಂಜೂರಾಗಿರುವುದು ನಿಜವೆ ? ಹಾಸನ ತಾಲ್ಲೂಕಿನ ಕಾರ್ಲೆ ಗ್ರಾಮಕ್ಕೆ ಪಿ.ಹೆಚ್.ಸಿ. ಸ್ಯಾಂಕ್ಷನ್ ಮಾಡಿರುವುದು ನಿಜವೆ ? ದಯವಿಟ್ಟು ಇದಕ್ಕೆ ಉತ್ತರ ಕೊಡಬೇಕು.

(ಗೊಂದಲ)

ಉಪಾಧ್ಯಕ್ಷೀಣಿಯವರು:– ಈಗ ಅವರು ಉತ್ತರ ಕೊಡಲಿ.

ಶ್ರೀ ಎಂ. ವೀರಪ್ಪ ಮೊಯಿಲಿ:– ಸನ್ಮಾನ್ಯ ಉಪಾಧ್ಯಕ್ಷೀಣಿಯವರೆ, ಮಾಜಿ ಆರೋಗ್ಯ ಸಚಿವರೇ ಅಲ್ಲಿ ಏನಾಗಿದೆಯೆಂದು ಹೇಳಿದ್ದರಿಂದ ಅದು ನಿಜವೇ ಆಗಿರುತ್ತದೆಯೇ ಹೊರತು ಅದು ನಿಜ ಆಗದೇ ಇರಲಿಕ್ಕೆ ಸಾಧ್ಯವಿಲ್ಲ. ಆಮೇಲೆ 1990–91ನೇ ಇಸವಿಯಲ್ಲಿ ತಾವು ಹೇಳಿದ್ದಂಥಾದ್ದನ್ನು ಮಂಜೂರು ಮಾಡಿದ್ದು ನಿಜ. ಆ ವರ್ಷ ಅದು 50 ಪಿ.ಹೆಚ್.ಸಿ. ಜಾಸ್ತಿ ಆಯಿತೆಂದು ಜಾರಿಗೊಳಿಸಲಿಲ್ಲ. ಅದನ್ನು ತಕ್ಷಣ ಜಾರಿಗೊಳಿಸಿ ಮಂಜೂರು ಮಾಡುತ್ತೇವೆ.

ಶ್ರೀ ಕೆ.ಹೆಚ್. ಹನುಮೇಗೌಡ:– ಇನ್ನೊಂದು ಉಪಪ್ರಶ್ನೆ ಇದೆ.

ಉಪಾಧ್ಯಕ್ಷೀಣಿಯವರು:– ಹರ್ಷಕುಮಾರ್ ಗೌಡ ಅವರು.

ಶ್ರೀ ಕೆ.ಹೆಚ್. ಹನುಮೇಗೌಡ:– ಮಾನ್ಯ ಅಧ್ಯಕ್ಷೀಣಿಯವರೇ, ಮಾನ್ಯ ಮುಖ್ಯಮಂತ್ರಿಯವರು ಮಂಜೂರು ಮಾಡುತ್ತೇವೆ ಎಂದು ಹೇಳಿದರು. ಆದರೆ ಇದು ವಿಳಂಬ ಏತಕ್ಕಾಗಿ ಆಯಿತು....

(ಗೊಂದಲ)

ಉಪಾಧ್ಯಕ್ಷೀಣಿಯವರು:– ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಕೊಟ್ಟಿದ್ದಾರೆ. ದಯಮಾಡಿ ಕುಳಿತುಕೊಳ್ಳಿ.

ನಿರುದ್ಯೋಗ ಸಿ.ಪಿ.ಎಡ್. ಅಭ್ಯರ್ಥಿಗಳು

(05) ಶ್ರೀ ಕೆ. ಹರ್ಷಕುಮಾರ್ ಗೌಡ (ಚಾಮರಾಜ)

ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಸಿಪಿಇಡಿ ತೇರ್ಗಡೆ ಹೊಂದಿ ನೌಕರಿ ಸಿಗದೆ ಪರದಾಡುತ್ತಿರುವ ಅಭ್ಯರ್ಥಿಗಳಿಗೆ ಉದ್ಯೋಗ ಒದಗಿಸುವಲ್ಲಿ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?
ಆ) ಈಗ ಸರ್ಕಾರವು ಕರೆದಿರುವ ಉಪಾಧ್ಯಾಯರ ಸಂದರ್ಶನದ ಜೊತೆಗೆ ಸಿಪಿಇಡಿ ಅಭ್ಯರ್ಥಿಗಳ ಸಂದರ್ಶನವನ್ನು ಕರೆಯಲು ಉದ್ದೇಶಿಸಲಾಗಿದೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು)

ಅ) ಕಾಲಕಾಲಕ್ಕೆ ಉದ್ಭವವಾಗುವ ಹುದ್ದೆಗಳಿಗೆ ನಿಯಮಾನುಸಾರ ದೈಹಿಕ ಶಿಕ್ಷಕರನ್ನು ಭರ್ತಿ ಮಾಡಲಾಗುವುದು.
ಆ) ವಿಶೇಷ ನೇಮಕಾತಿ ನಿಯಮಗಳನ್ನು ಹೊರಡಿಸಲಾಗಿದ್ದು, ಅದರಂತೆ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಎಸ್.ಎಂ. ಯಾಹ್ಯ:– ಮಾನ್ಯ ಉಪಾಧ್ಯಕ್ಷೀಣಿಯವರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಪ್ರಶ್ನೆ ಕ್ರಮಾಂಕ 25 (5) ಕ್ಕೆ ಉತ್ತರವನ್ನು ಒದಗಿಸಿದ್ದೇನೆ.

ಶ್ರೀ ಕೆ. ಹರ್ಷಕುಮಾರ್‌ಗೌಡ:– ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಸಹಸ್ರಾರು ಜನ ಯುವಕರು ದೈಹಿಕ ಶಿಕ್ಷಣದಲ್ಲಿ ತರಬೇತಿ ಹೊಂದಿದ್ದರೂ ಉದ್ಯೋಗವಿಲ್ಲದೆ ಸಂಕಷ್ಟಕ್ಕೊಳಗಾಗಿದ್ದಾರೆ. ಮಾನ್ಯ ಸಚಿವರು ನನ್ನ 'ಅ' ಪ್ರಶ್ನೆಗೆ ಉತ್ತರಿಸುತ್ತಾ ಕಾಲಕಾಲಕ್ಕೆ ಉದ್ಭವವಾಗುವ ಹುದ್ದೆಗಳಿಗೆ ನಿಯಮಾನುಸಾರ ದೈಹಿಕ ಶಿಕ್ಷಕರನ್ನು ಭರ್ತಿ ಮಾಡಲಾಗುವುದು ಎಂದು ತಿಳಿಸಿದ್ದಾರೆ. ತಾವುಗಳು ಹೇಳಿದಂತೆ, ಭರ್ತಿ ಮಾಡುವಲ್ಲಿ ಯಾವ ಮಾನದಂಡವನ್ನು ಅಳತೆಗೋಲನ್ನು ಇಟ್ಟುಕೊಂಡು ಖಾಲಿ